2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,
ಬೆಳಗಾವಿ.

ಸೇಷನ್ ಕೇಸ್ ನಂ.191/2025

ಪಿ.ಡಬ್ಲ್ಯೂಃ 04

ಸಿ.ಡಬ್ಲ್ಯೂಃ 11

ಸಾಕ್ಷಿಯ ಹೆಸರುಃ ಶ್ರೀಮತಿ. ಲಕ್ಷ್ಮೀ ರಾಕೇಶ ಮುದಗಲ್

ಗಂಡನ ಹೆಸರುಃ ರಾಕೇಶ ಮುದಗಲ್

ವಯಸ್ಸುಃ 29 ವರ್ಷ

ಉದ್ಯೋಗಃ ಟೇಲರಿಂಗ್

ವಾಸಃ ಗಾಂಧಿನಗರ, ಖಾನಾಪೂರ

**ದಿನಾಂಕಃ 10.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ಸುರೇಶ ಬಂಡಿವಡ್ಡರ ನನ್ನ ಅತ್ತೆಯ ತಂಗಿ ಮಗ. ಚಾಸಾಃ 1 ಆತನ ತಮ್ಮ. ಚಾಸಾಃ 32 ಆತನ ಹೆಂಡತಿ. ಈ ಪ್ರಕರಣದ ಚಾಸಾಃ 12 ರಿಂದ 31 ರವರು ಗೊತ್ತು. ಅವರು ನಮ್ಮ ಗಲ್ಲಿಯಲ್ಲಿ ವಾಸಿಸುತ್ತಾರೆ.

2. ಸುರೇಶ ಬಂಡಿವಡ್ಡರ ಹಾಗೂ ಆತನ ಹೆಂಡತಿ ಹಾಗೂ ಇಬ್ಬರು ಮಕ್ಕಳ ಸಮೇತ ಖಾನಾಪೂರದ ಗಾಂಧಿನಗರದ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಈ ಪ್ರಕರಣದ 1 ನೇ ಆರೋಪಿಯು ಚಾಸಾಃ 32 ರವರ ಜೊತೆ ಸಂಬಂಧ ಹೊಂದಿದ್ದ ಈ ವಿಚಾರ ಸುರೇಶ ಬಂಡಿವಡ್ಡರವರಿಗೆ ತಿಳಿದು 1 ನೇ ಆರೋಪಿಗೆ ನೀನು ನಮ್ಮ ಮನೆಯ ಕಡೆ ಬರಬೇಡ ಎಂದು ತಾಕೀತು ಮಾಡಿದ್ದು ಆದರೆ ಆತ ಅದನ್ನು ನಿಲ್ಲಿಸಿರುವುದಿಲ್ಲ. ಈ ಬಗ್ಗೆ ಗಂಡ ಹೆಂಡತಿಯ ನಡುವೆ ಜಗಳ ನಡೆದು ದಿಃ 02.08.2025 ರಂದು ಚಾಸಾಃ 32 ರವರು ತನ್ನ ಮಕ್ಕಳನ್ನು ಕರೆದುಕೊಂಡು ತನ್ನ ತವರು ಮನೆಗೆ ಹೋಗುತ್ತೇನೆಂದು ಹೇಳಿ ಹೋಗಿದ್ದು, ಆದರ ಅವರು ಸುರೇಶ ಬಂಡಿವಡ್ಡರ ರವರಿಗೆ ಬೆಳಗಾವಿಯ ರೈಲ್ವೆ ನಿಲ್ದಾಣದಲ್ಲಿ ಸಿಕ್ಕರು ಎಂದು ದಿಃ 03.08.2025 ರಂದು ಮನೆಗೆ ಕರೆದುಕೊಂಡು ಬಂದಿದ್ದರು.

3. ಆ ದಿನ ಈ ಪ್ರಕರಣದ 2 ನೇ ಆರೋಪಿಯು ನಮ್ಮನ್ನೆಲ್ಲಾ ಕರೆದು ನನ್ನ ಮಗ ಹಾಗೂ ಚಾಸಾಃ 32 ರವರ ನಡುವೆ ಇರುವ ಅಕ್ರಮ ಸಂಬಂಧದ ಬಗ್ಗೆ ಗಂಡ ಹೆಂಡತಿಯ ನಡುವೆ ಆಗಾಗ್ಗೆ ಜಗಳ ನಡೆಯುತ್ತಿದ್ದು ಇದನ್ನು ನಮ್ಮಲ್ಲೇ ಕುಳಿತು ಬಗೆಹರಿಸಿಕೊಳ್ಳೋಣ ಎಂದು ಹೇಳಿ ನಮ್ಮನ್ನು ಅ ದಿನ ಸಾಯಂಕಾಲ 04.20 ಗಂಟೆಗೆ ಖಾನಾಪೂರದ ಗಾಂಧಿನಗರದಲ್ಲಿರುವ ಹನುಮಂತ ದೇವರ ಗುಡಿಗೆ ಬರಲು ಹೇಳಿದ್ದರು. ಅದರಂತೆ ನಾನು, ನನ್ನ ಗಂಡ ಚಾಸಾಃ 17, ನನ್ನ ಅತ್ತೆ ಚಾಸಾಃ 15, ಚಾಸಾಃ 16, ಮೃತ ಸುರೇಶ ಬಂಡಿವಡ್ಡರ, ಚಾಸಾಃ 1, ಪಂಚರಾಗಿ ಚಾಸಾಃ 26, 27, 30, 26, 31, 25, 13, 23, 22, 32 ರವರು ಸೇರಿ ಒಟ್ಟು 30 ರಿಂದ 40 ಜನ ಆ ದಿನ ಪಂಚಾಯತಿಗೆ ಬಂದಿದ್ದರು.

4. ಆ ಕಾಲಕ್ಕೆ ನಾನು 1 ನೇ ಆರೋಪಿಯನ್ನು ಉದ್ದೇಶಿಸಿ ಚಾಸಾಃ 32 ರವರಿಗೆ ಮದುವೆಯಾಗಿ ಗಂಡ, ಮಕ್ಕಳಿವೆ ನಿನಗೆ ಎಷ್ಟು ಬಾರಿ ಹೇಳಿದರೂ ನೀನು ಅವರ ಮನೆಗೆ ಹೋಗುವುದನ್ನು ಬಿಟ್ಟಿರುವುದಿಲ್ಲ ಎಂದು ಬುದ್ದಿವಾದ ಹೇಳುತ್ತಿದ್ದೆ ಆ ಕಾಲಕ್ಕೆ ಆತನು ಸುರೇಶ ಬಂಡಿವಡ್ಡರ ರವರಿಗೆ ಏನೋ ಅವಾಚ್ಯವಾಗಿ ಬೈದ ಅದರಿಂದ ಸಿಟ್ಟಿಗೆದ್ದ ಸುರೇಶ ಬಂಡಿವಡ್ಡರ 1 ನೇ ಆರೋಪಿಗೆ ಒಂದು ಪೆಟ್ಟನ್ನು ಕೊಟ್ಟಿರುತ್ತಾನೆ. ಆ ಕಾಲಕ್ಕೆ 1 ನೇ ಆರೋಪಿಯು ಚಾಸಾಃ 32 ಸ್ನೇಹಾಳಿಗೂ ಸಹ ಏನೋ ಕೆಟ್ಟದಾಗಿ ಬೈದ ಇದರಿಂದ ಅಲ್ಲಿ ಸೇರಿದ್ದ ಜನ ಸಿಟ್ಟಿಗೆದ್ದು ಆತನಿಗೆ ಬಡಿಯಲು ಪ್ರಾರಂಭಿಸಿದರು. ಆ ಕಾಲಕ್ಕೆ ಆರೋಪಿ 1, 2 ಹಾಗೂ 3 ರವರು ನನ್ನ ಮೈದುನ ಸುರೇಶ ಬಂಡಿವಡ್ಡರ ರವರನ್ನು ಆಕಡೆಗೆ ಎಳೆದುಕೊಂಡು ಹೋಗಿ ಆತನಿಗೆ ಕಾಲಿನಿಂದ ಒದೆಯುವುದು ಕೈಯಿಂದ ಹೊಡೆಯುವುದನ್ನು ಮಾಡುತ್ತಿದ್ದರು. ಆಗ 2 ನೇ ಆರೋಪಿಯು ತನ್ನಲ್ಲಿದ್ದ ಚಾಕುವಿನಿಂದ ಸುರೇಶನ ಕುತ್ತಿಗೆಗೆ, ಮುಖಕ್ಕೆ ಹಾಗೂ ಹೊಟ್ಟೆಗೆ ಚುಚ್ಚಿರುತ್ತಾನೆ. ಆ ಕಾಲಕ್ಕೆ ಚಾಸಾಃ 30 ರವರು ರಕ್ಷಿಸಲು ಹೋದಾಗ ಆತನಿಗೂ ಸಹ 2 ನೇ ಆರೋಪಿಯು ಆತನ ಎಡಗೈಗೆ ಚಾಕುವಿನಿಂದ ಹಲ್ಲೆ ಮಾಡಿರುತ್ತಾನೆ. ಆಗ ಅಲ್ಲಿಂದ ಈ ಪ್ರಕರಣದ 3 ಜನ ಆರೋಪಿತರು ಓಡಿ ಹೋಗಿರುತ್ತಾರೆ.

5. ಗಾಯಗೊಂಡಿದ್ದ ನನ್ನ ಮೈದುನ ಸುರೇಶ ಬಂಡಿವಡ್ಡರ ರವರನ್ನು ಚಿಕಿತ್ಸೆಗೆ ಕರೆದುಕೊಂಡು ಹೋಗಲು 108 ಅಂಬುಲೆನ್ಸ್‌ನ್ನು ಕರೆಸಿರುತ್ತೇವೆ. ಆತನನ್ನು ಮೊದಲು ಖಾನಾಪೂರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೇವು. ಆದರೆ ಗಾಯಾಳುವಿಗೆ

ತೀವ್ರತರವಾದ ಗಾಯಗಳಾಗಿರುವುದರಿಂದ ಆತನನ್ನು ತಕ್ಷಣ ಬೆಳಗಾವಿಯ ಉನ್ನತ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿರುತ್ತಾರೆ. ಅದರಂತೆ ಆತನನ್ನು ಬೆಳಗಾವಿಯ ಆಸ್ಪತ್ರೆಗೆ ಕರೆದುಕೊಂಡು ಹೋಗುವ ಕಾಲಕ್ಕೆ ಆತ ಬೆಳಗಾವಿಯ ಚನ್ನಮ್ಮಾ ವೃತ್ತದ ಬಳಿ ತೀರಿಕೊಂಡಿದ್ದಾನೆಂದು ಮಾಹಿತಿ ಬಂದಿರುತ್ತದೆ.

6. ನಂತರ ಈ ಪ್ರಕರಣದ ಬಗ್ಗೆ ನನ್ನ ಚಿಕ್ಕ ಮೈದುನ ಚಾಸಾಃ 1 ರವರು ಖಾನಾಪೂರ ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ. ಈ ಪ್ರಕರಣದ ಬಗ್ಗೆ ಪೋಲೀಸರು ನನ್ನನ್ನು ಸಹ ವಿಚಾರಣೆ ಮಾಡಿದಾಗ ಈ ಮೇಲೆ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಖುದ್ದು ಹಾಜರಿರುವ 3 ನೇ ಆರೋಪಿ ಹಾಗೂ ದೃಶ್ಯ ಮಾಧ್ಯಮದ ಮೂಲಕ ಹಾಜರಾಗಿರುವ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯ ಮುಂದುವರೆದು ಈ ಪ್ರಕರಣದ 2 ನೇ ಆರೋಪಿಯು ಸುರೇಶ ಬಂಡಿವಡ್ಡರ ನನ್ನು ಕೊಲ್ಲಲೇ ಬೇಕು ಎನ್ನುವ ಉದ್ದೇಶದಿಂದ ಪಂಚಾಯತಿಗೆ ಚಾಕು ತೆಗೆದುಕೊಂಡು ಬಂದು ಹಲ್ಲೆ ಮಾಡಿ ಕೊಲೆ ಮಾಡಿರುತ್ತಾನೆಂದು ಹೇಳುತ್ತಾರೆ.

7. ನಾನು ಘಟನಾ ಕಾಲಕ್ಕೆ ಚಾಕುವನ್ನು ನಿಖರವಾಗಿ ನೋಡಿರುವುದಿಲ್ಲ ಆದರೆ ಅದು ಎಷ್ಟು ಉದ್ದದ್ದು ಎಂದು ಬೇಕಾದರೆ ಹೇಳುತ್ತೇನೆಂದು ಹೇಳುತ್ತಾರೆ. ಸಾಕ್ಷಿಯು ಮುಂದುವೆರದು ಆರೋಪಿತರು ಸುರೇಶ ಬಂಡಿವಡ್ಡರ ರವರುನ್ನ ಕೊಲೆ ಮಾಡಿ ಅವರ ಮಕ್ಕಳನ್ನು ಅನಾಥ ಮಾಡಿದ್ದಾರೆ ಆದ್ದರಿಂದ ಅವರಿಗೆ ಶಿಕ್ಷೆ ಆಗಬೇಕು ಎಂದು ಹೇಳುತ್ತಾರೆ.

**ಪಾಟೀ ಸವಾಲುಃ 1 ರಿಂದ 3 ನೇ ಆರೋಪಿತರ ಪರ ಶ್ರೀ. ಎಂ.ಎಲ್.ಐ. ವಕೀಲರಿಂದಃ**

ಈ ಪ್ರಕರಣದಲ್ಲಿ ಆರೋಪಿತರು ಸಲ್ಲಿಸಿದ ಭಾರತೀಯ ನ್ಯಾಯ ಸುರಕ್ಷಾ ಸಂಹಿತಾ ಕಲಂ 254(3) ರ ಅರ್ಜಿಯನ್ನು ಈ ನ್ಯಾಯಾಲಯವು ಆದಾಗಲೇ ಪುರಸ್ಕರಿಸಿ ಈ ಪ್ರಕರಣದ ಎಲ್ಲಾ ಪ್ರತ್ಯಕ್ಷ ಸಾಕ್ಷಿಗಳ ಮುಖ್ಯ ವಿಚಾರಣೆ ಮುಗಿದ ನಂತರ ಅವರುಗಳ ಪಾಟೀ ಸವಾಲು ಮಾಡಲು ಅವಕಾಶ ನೀಡಿರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.